ಮೈಸೂರ ಗಿಜಿಟ.

ನಂ. 7] ಸರ್ಕಾರದಿಂದ ಪ್ರಾಯಿಷ್ ಆದ್ದು. [1895.

ಬೆಂಗಳೂರು, ಗುರುವಾರ, ಫಿಬ್ರವರಿ ತಾ|| 28, ಸ್ ಸ್ 1895.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡು ಪ್ರೆಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟ್ ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ, ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟ್‌ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಆಕ್ಟ್‌ಗಳು ವ ರೆಗ್ಯುಲೇಷ್‌ಗಳು.—ಇಲ್ಲ.

4ನೇ ಭಾಗ—ಸರ್ಕಾರೀ ಕಾಗದ ಪತ್ರಗಳು.—ಇಲ್ಲ.

ಪ್ರತಿ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ತಾರೀಖು 20ನೇ ಡಿಸೆಂಬರ್ 1894.

ನಂ. ಎಫ್ 147-92.—ಮೈಸೂರ್ ಸರ್ಕಾರದವರು ಆಜ್ಞಾಪಿಸುವದೇನಂದರೆ, ಮೈಸೂರ್ ಲ್ಯಾಂಡ್ ರೆವಿನ್ಯೂ Xನೇ ರೂಲ್ 4ನೇ ಪ್ಯಾರಾಕ್ಕೆ ಬದಲಾಗಿ ಇದರಡಿ ಬರುವದನ್ನು ಉಪಯೋಗಿಸತಕ್ಕದ್ದು:—

"4. ಲೋಕಲ್‌ಫಂಡು ಇಲಾಖೇಯವರು ಪಬ್ಲಿಕ್ ವರ್ಕ್ಸ್ ಇಲಾಖೇಯವರು ಮತ್ತು ಇತರ ಸರ್ಕಾರದ ಇಲಾಖೇಯವರು, ವ ಮ್ಯುನಿಸಿಪಾಲಿಟಿಯವರು ಅಥವಾ ಅವರುಗಳ ಕಂಟ್ರಾಕ್ಟ್‌ದಾರರು ಹಾಂಗೆ ಮಾಡುವದಕ್ಕೆ ವಿಶೇಷತಃ ಅಧಿಕಾರ ಕೊಡಲ್ಪಟ್ಟರೆ ಅವರು ಗವರ್ಮೆಂಟಿನಿಂದ ವಿಧಿಸೋಣಾಗುವ ಅಂಥಾ ರಾಜಖಾಲು ಮೊಬಲಗನ್ನು ತೆರುವದಕ್ಕೆ ವಳಪಟ್ಟು ನದಿಗಳ, ನಾಲಾಗಳ

ಅಥವಾ ಸರ್ಕಾರ ಕೆರೆಗಳ ಅಂಗಳಗಳಿಂದಲಾಗಲಿ, ಸರ್ಕಾರ ಕೆಲಸಗಳಿಗೆ ಪ್ರಜೆಗಳ ಉಪಯೋಗಾರ್ಥವಾದ ವಿಶೇಷ ಕೆಲಸಗಳಿಗೋಸ್ಕರ ಗೊತ್ತು ಮಾಡಲ್ಪಡದಂಥಾ ಆಕಾರ ಕಾಣದ ಅಥವಾ ಹಿಡುವಳೀಲಿ ಯಿಲ್ಲದ ಜಮೀನಿನಿಂದಲಾಗಲಿ ಮಣ್ಣು, ಕಲ್ಲು, ಕಂಕರ್, ಮರಳು, ಮರಂಮತ್ತು ಇತರ ಪದಾರ್ಥಗಳನ್ನು ಸಾಗಿಸಬಹುದು; ಪರಂತು ಡಿಪ್ಯೂಟಿ ಕಮ್ಮಿಷನರವರು ಸದರೀ ಪದಾರ್ಥಗಳು ಈ ರೂಲಿಗನು ಸಾರವಾಗಿ ಗೊತ್ತಾದ ಪ್ರದೇಶಗಳಿಂದ ಸಾಗಿಸಲ್ಪಡಕೂಡದೆಂದು ನಿಷೇಧಿಸಬಹುದು. ಅಥವಾ ಅವರಿಗೆ ಯುಕ್ತವಾಗಿ ಕಾಣಬರುವ ಷರತ್ತುಗಳನ್ನು ವಿಧಿಸಬಹುದು."

ತಾರೀಖು 31ನೇ ಜನವರಿ 1895.

ನಂ. 11956.—ಜೆ. 674.—1870ನೇ ಇಸವಿಯ VIIನೇ ನಂಬರ್ ಕೋರ್ಟ್‌ಫೀಸ್ ಆಕ್ಟಿನ 35ನೇ ಸೆಕ್ಷನ್‌ನಿನಿಂದ ಉಂಟುಮಾಡಲ್ಪಟ್ಟಿರುವ ಅಧಿಕಾರಗಳನ್ನು ಚಲಾಯಿಸಿ ಘನವನ್ನೈದಿದ ಶ್ರೀಮಂ ಮಹಾರಾಜಾ ಸರ್ಕಾರದವರು ಇದರಿಂದ ಆಜ್ಞಾಪಿಸುತ್ತಾರೆ ನಂದರೆ:—

1882ನೇ ಇಸವಿಯ XIVನೇ ನಂಬರ್ ಆಕ್ಟಾದ ಸಿವಿಲ್ ಪ್ರೊಸಿಜ್ಯೂರ್ ಕೋಡಿನ 244ನೇ ಸೆಕ್ಷನ್ (ಸಿ) ಕ್ಲಾಜ್ ಅನುಸರಿಸಿ, ಕೊಡಲ್ಪಡುವ ಹುಕುಂಗಳ ಮೇಲಿನ ಅಪೀಲ್‌ಗಳಿಗಾಗಿ ವಸೂಲ್ ಮಾಡಲ್ಪಡತಕ್ಕ ಫೀಜ್ ಮೊಬಲಗು, 1870ನೇ ಇಸವಿಯ ಕೋರ್ಟ್ ಫೀಜ್ ಆಕ್ಟಿನ ಯರಡನೇ ಷೆಡ್ಯೂಲ್‌ನಲ್ಲಿ ಕಂಡ 11ನೇ ಆರ್ಟಿಕಲ್ ಪ್ರಕಾರ ವಸೂಲಾಗತಕ್ಕ ಮೊಬಲಗಿಗೆ ತಕ್ಕಂತೆ ನಿರ್ಣಯಿಸಿದ್ದಾಗಿರತಕ್ಕದ್ದು.

ತಾರೀಖು 4ನೇ ಫಿಬ್ರವರಿ 1895.

ನಂ. 11966.—ಜೆ. 682.—ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್ 12ನೇ ಸೆಕ್ಷನ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟು ಎಕ್ಸ್ಟ್ರಾ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಸರ್ ವಿ. ಶ್ರೀನಿವಾಸಾಚಾರ್ಲುಯವರು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ನೊಕರರ್ ಮಾಡಲ್ಪಟ್ಟು, ಸದರೀ ಕೋಡಿನ 37ನೇ ಸೆಕ್ಷನ್ ಅನುಸರಿಸಿ, ಸದರೀ ಕ್ಲಾಸ್ ಮಾಜಿಸ್ಟ್ರೇಟರಿಗೆ ಜಾಸ್ತೀ ಅಧಿಕಾರವಾಗಿ ಗವರ್ನ್‌ಮೆಂಟಿನವರು ಕೊಡಬಹುದೆಂದು ನಾಲ್ಕನೆಯ ಷೆಡ್ಯೂಲ್‌ನಲ್ಲಿ ನಮೂದಾಗಿರುವ ಇದರಡಿ ತಿಳಿಸಲ್ಪಡುವ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

(1) ಆಗಿಂದಾಗ್ಯೆ ಹೇಸಿಗೆ ಮಾಡಕೂಡದೆಂದು ಹುಕುಂ ಕೊಡುವ ಅಧಿಕಾರ,—143ನೇ ಸೆಕ್ಷನ್.

(2) 144ನೆಯ ಸೆಕ್ಷನ್ ಅನುಸರಿಸಿ ಹುಕುಂ ಕೊಡುವ ಅಧಿಕಾರ.

(3) ಲಾಷ್ ವಿಚಾರಣೆ ಮಾಡುವ ಅಧಿಕಾರ—174ನೆಯ ಸೆಕ್ಷನ್ ಪ್ರಕಾರ.

(4) ಫಿರ್ಯಾದಿನ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್ ಪ್ರಕಾರ.

(5) ಪೊಲೀಸಿನವರ ರಿಪೋರ್ಟ್‌ಗಳ ಮೇಲೆ ಮೊಕದ್ದಮೆಗಳನ್ನು ಹಿಡಿಯುವ ಅಧಿಕಾರ,—191ನೇ ಸೆಕ್ಷನ್.

ತಾರೀಖು 18ನೇ ಫಿಬ್ರವರಿ 1895.

ನಂ. 12631.—ಜಿ. 2816.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಮೈಸೂರು ದಿವಾನ ರವರ ಚೀಫ್ ಸೆಕ್ರಟೆರಿ ಮೆಸ್ಸರ್ ಟಿ. ಆನಂದರಾಯರವರಿಗೆ, 1895ನೇ ಇಸವಿ ಫಿಬ್ರವರಿ 12ನೇ ತಾರೀಖು ಲಾಗಾಯತು ಯರಡು ತಿಂಗಳೂ ಹದಿನೈದು ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. 12633.—ಜಿ. 2818.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಸೂಪರ್‌ಟೆಂಡೆಂಟೆ ಮೆಸ್ಸರ್ ಸಿ. ಹಾರ್ಡಿಯವರಿಗೆ, 1895ನೇ ಇಸವಿ ಫಿಬ್ರವರಿ 15ನೇ ತಾರೀಖು ಲಾಗಾಯತು ಮೂರುತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ತಾರೀಖು 19ನೇ ಫಿಬ್ರವರಿ 1895.

ನಂ. 12707.—ಜಿ. 2834.—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ 188ನೇ ಆರ್ಟಿಕಲ್ ಅನುಸರಿಸಿ, ಸರ್ವೇ ಇಲಾಖಾ ಅಸಿಸ್ಟೆಂಟ್ ಸೂಪರ್‌ಟೆಂಡೆಂಟ್ ಮೆಸ್ಸರ್ ಡಿ. ಶಾಮರಾಯರವರಿಗೆ, 1895ನೇ ಇಸವಿ ಫಿಬ್ರವರಿ ದಾಯತು ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.